ಮೂಲ ದಾವಾ ಸಂಖ್ಯೆ 181/2013 ಡಿ ಡಬ್ಲ್ಯೂ 1 ದಾಸರ ಓಬಪ್ಪ ಕೋಂ ಸಣ್ಣ ಓಬಪ್ಪ

(ದಿನಾಂಕ 12.01.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರಿದ ಪಾಟೀ ಸವಾಲು ವಾದಿಗಳ ಪರ ಶ್ರೀ ಎಸ್ ಬಿ ವಿ ವಕೀಲರಿಂದಃ-

ಮ್ಯೂಟೇಶನ್ ಹಾಗೂ ಪಹಣಿಯ ಬಗ್ಗೆ ನನಗೆ ಗೊತ್ತಿರುತ್ತದೆ. ಸರ್ವೆ ನಂಬರ 329 ಬಿ ಗೆ ಸಂಬಂಧಪಟ್ಟಂತೆ ನಾನು ಮ್ಯೂಟೇಶನ್ ಮಾಡಿಸಿಕೊಂಡಿರುತ್ತೇನೆ . ನಿ ಪಿ 1 ರಲ್ಲಿ ಉಲ್ಲೇಖ ಮಾಡಿರುವಂತಹ ಸರ್ವೆ ನಂಬರಗಳು ನನ್ನ ತಂದೆಯ ಹೆಸರಿಗೆ ಇದ್ದು ನಾನು ಅವುಗಳನ್ನು ಮ್ಯೂಟೇಶನ್ ಮಾಡಿಸಿಕೊಂಡಿರುತ್ತೇನೆ. ನಿ ಪಿ 1 ರ ಹಕ್ಕು ಬದಲಾವಣೆ ಸರಿ ಇರುತ್ತದೆ. ನಿ ಪಿ 1 ರಲ್ಲಿ ಬರೆದಿರುವ ಆದೇಶದ ಪ್ರಕಾರ ಎಲ್ಲಾ ಸರ್ವೆ ನಂಬರಗಳು ಜಂಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿ ಬರೆಯಲಾಗಿರುವ ಸರ್ವೆ ಸಂಖ್ಯೆ 329 ಬಿ ಪೈಕಿ 6 ಎಕರೆ 33 ಸೆಂಟ್ ಜಮೀನು ವಾದಿಗಳಿಗೂ ಸೇರಿರುತ್ತದೆ ಎಂದರೆ ಸಾಕ್ಷಿಯು ಅವರು ನನಗೆ ಸ್ಟಾಂಪ್ ಪೇಪರ್ ಮೇಲೆ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸರ್ವೆ ಸಂಖ್ಯೆ 329 ಬಿ 6 ಎಕರೆ 33 ಸೆಂಟ್ ನನ್ನ ಸ್ವಾಧೀನದಲ್ಲಿ ಇರುತ್ತದೆ. ಸದರಿ ಜಮೀನು ಕೆರೆಗೆ ಹೋಗಿರುತ್ತದೆ. ಸದರಿ ಸರ್ವೆ ಸಂಖ್ಯೆಯ ಜಮೀನಿಗೆ ಸಂಬಂಧಪಟ್ಟಂತೆ ಸರ್ಕಾರದವರು ಪರಿಹಾರವನ್ನು ಕೊಟ್ಟಿರುತ್ತಾರೆಂದರೆ ಸರಿ. ಸಂಪೂರ್ಣ ಪರಿಹಾರವನ್ನು ನಾನೇ ತೆಗೆದು ಕೊಂಡಿರುತ್ತೇನೆಂದರೆ ಸರಿ. ನಾನು ಸರ್ವೆ ಸಂಖ್ಯೆ 329 ಬಿ ಗೆ ಸಂಬಂಧಪಟ್ಟಂತೆ ವಾದಿಗಳು ಬಾಂಡ್ ಮೇಲೆ ಬರೆದುಕೊಟ್ಟಂತಹ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ಕಾರ ಆದೇಶದ ಪ್ರಕಾರ ಸದರಿ ಸರ್ವೆ ಸಂಖ್ಯೆ 329 ಬಿ ಜಂಟಿ ಎಂದು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ತಹಶೀಲ್ದಾರವರ ಆದೇಶದ ಪ್ರಕಾರ ಸರ್ವೆ ಸಂಖ್ಯೆ 329 ಬಿ ಜಮೀನು ವಾದಿ ಮತ್ತು ಪ್ರತಿವಾದಿಗಳು ಇಬ್ಬರಿಗೂ ಸೇರಿದಂತಹ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ತಹಶೀಲ್ದಾರರವರು ಆದೇಶದ ಪ್ರಕಾರ ಸರ್ವೆ ಸಂಖ್ಯೆ 329 ಬಿ ವಾದಿ ಮತ್ತು ಪ್ರತಿವಾದಿಗಳು ಇಬ್ಬರಿಗೂ ಸೇರಿದಂತಹ ಜಂಟಿ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸರ್ವೆ ಸಂಖ್ಯೆ 329 ಬಿ ಸ್ವತ್ತಿಗೆ ಸಂಧಪಟ್ಟಂತೆ ನಾನು ಸಂಪೂರ್ಣ ಮಾಲೀಕನಾಗಿರುವುದಿಲ್ಲವೆಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡಿ ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಾನು ಸರ್ವೆ ಸಂಖ್ಯೆ 329 ಬಿ ಆಸ್ತಿಯನ್ನು

ನನ್ನ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಸದರಿ ದಾವೆಯನ್ನು ಹೊರತುಪಡಿಸಿ ವಾದಿಯರ ವಿರುದ್ಧ ಬೇರೆ ಯಾವುದೇ ದಾವೆಯನ್ನು ದಾಖಲಿಸಿರುವುದಿಲ್ಲ. ನಾನು ದಶಮಾಪುರ ಸೊಸೈಟಿಯಲ್ಲಿ ಅಧ್ಯಕ್ಷನಾಗಿದ್ದೆ.

(ಸಾಕ್ಷಿಯ ಅನಾರೋಗ್ಯದ ಕಾರಣ ಪಾಟೀಸವಾಲನ್ನು ಮುಂದೂಡಲಾಯಿತು. )

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ